**ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಶಶೀಲ್ ಜಿ ನಮೋಶಿ, ಶ್ರೀ ಎಸ್.ವ್ಹಿ. ಸಂಕನೂರ ಹಾಗೂ ಶ್ರೀ ನಿರಾಣಿ ಹನುಮಂತ್ ರುದ್ರಪ್ಪ ಅವರುಗಳು ನಿಯಮ–72ರ ಅಡಿಯಲ್ಲಿ ಗಮನ ಸೆಳೆದ ಸೂಚನೆಗೆ ಉತ್ತರಿಸುವ ಬಗ್ಗೆ**

**ವಿಷಯ:**

ಕಳೆದ ಎರಡು ವರ್ಷಗಳಿಂದ ಹೊಸದಾಗಿ ರಚನೆಯಾದ ತಾಲ್ಲೂಕುಗಳಲ್ಲಿನ ಆರ್.ಎಂ.ಎಸ್.ಎ ಶಾಲೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರುಗಳಿಗೆ 4–5 ತಿಂಗಳಿಗೊಮ್ಮೆ ವೇತನ ಪಾವತಿಯಾಗುತ್ತಿದೆ.

ಸದರಿ ಶಿಕ್ಷಕರುಗಳಿಗೆ 4–5 ತಿಂಗಳಿಗೊಮ್ಮೆ ವೇತನ ಪಾವತಿಸುತ್ತಿರುವ ಕಾರಣ ಜೀವನ ನಿರ್ವಹಣೆ ಕಷ್ಟಕರವಾಗುತ್ತಿರುವುದನ್ನು ಗಮನಿಸಿ ಸದರಿ ಶಿಕ್ಷಕರುಗಳಿಗೆ ಪ್ರತಿ ತಿಂಗಳು ವೇತನ ಪಾವತಿ ಮಾಡುವ ಕುರಿತು ಕ್ರಮ ಕೈಗೊಳ್ಳಬೇಕೆಂಬ ವಿಷಯದ ಕುರಿತು ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖಾ ಸಚಿವರ ಗಮನ ಸೆಳೆಯ ಬಯಸುತ್ತೇನೆ.

**ಉತ್ತರ:**

ಹೊಸ ತಾಲ್ಲೂಕುಗಳು ಆರ್ಥಿಕ ವರ್ಷದ ಮಧ್ಯಭಾಗದಲ್ಲಿ ರಚನೆಗೊಂಡ ಕಾರಣ ಸಂಬಂಧಿಸಿದ ಆರ್.ಎಂ.ಎಸ್.ಎ ಶಾಲೆಗಳ ಡಿ.ಡಿ.ಓ ಕೋಡ್‌ಗಳನ್ನು ಸೃಜನೆ ಮಾಡಲು ಸಾಧ್ಯವಾಗಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಕಳೆದ ಸಾಲಿನಲ್ಲಿ ಚಾಲ್ತಿಯಲ್ಲಿದ್ದ ಹಿಂದಿನ ತಾಲ್ಲೂಕುಗಳ ಡಿ.ಡಿ.ಓ ಕೋಡ್‌ಗಳಿಂದಲೇ ವೇತನ ಅನುದಾನವನ್ನು ಸೆಳೆಯಲು ಆರ್ಥಿಕ ಇಲಾಖೆಯು ವಿಶೇಷ ಅನುಮತಿಯನ್ನು ನೀಡಿದ್ದರಿಂದ ಆರ್.ಎಂ.ಎಸ್.ಎ ಶಾಲೆಗಳ ವೇತನ ಅನುದಾನವನ್ನು ಸೆಳೆಯಲಾಗಿತ್ತು.

2024–25ನೇ ಸಾಲಿಗೆ ರಾಜ್ಯದ ಎಲ್ಲಾ ಹೊಸ ತಾಲ್ಲೂಕುಗಳ ಆರ್.ಎಂ.ಎಸ್.ಎ ಶಾಲೆಗಳ ಡಿ.ಡಿ.ಓ ಕೋಡ್‌ಗಳ ಸೃಜನೆಯಾಗಿ ಖಜಾನೆ–2 ತಂತ್ರಾಂಶದಲ್ಲಿ ಮ್ಯಾಪ್ ಮಾಡಿಸಿ ವೇತನವನ್ನು ಸೆಳೆಯಲಾಗುತ್ತಿದೆ. ಆದರೆ, ಬಿಜಾಪುರ ಜಿಲ್ಲೆಯ 3 ತಾಲ್ಲೂಕುಗಳು, ಕಲಬುರ್ಗಿ ಜಿಲ್ಲೆಯ 2 ತಾಲ್ಲೂಕುಗಳು ಹಾಗೂ ಬಾಗಲಕೋಟೆ ಜಿಲ್ಲೆಯ 1 ತಾಲ್ಲೂಕು ಒಳಗೊಂಡಂತೆ ಒಟ್ಟಾರೆಯಾಗಿ 6 ತಾಲ್ಲೂಕುಗಳ ಡಿ.ಡಿ.ಓ ಕೋಡ್‌ಗಳು ಖಜಾನೆ–2 ತಂತ್ರಾಂಶದಲ್ಲಿ ಮ್ಯಾಪ್ ಮಾಡಿಸದ ಹಿನ್ನೆಲೆಯಲ್ಲಿ, ಸದರಿ 6 ತಾಲ್ಲೂಕುಗಳಲ್ಲಿ ಸಕಾಲದಲ್ಲಿ ವೇತನವನ್ನು ಸೆಳೆಯಲು ಸಾಧ್ಯವಾಗಿರುವುದಿಲ್ಲ. ಪ್ರಸ್ತುತ 6 ತಾಲ್ಲೂಕುಗಳ ಆರ್.ಎಂ.ಎಸ್.ಎ ಶಾಲೆಗಳ ಡಿ.ಡಿ.ಓ

ಮ್ಯಾಪಿಂಗ್ ಕಾರ್ಯ ಪ್ರಗತಿಯಲ್ಲಿದ್ದು, ಸದ್ಯದಲ್ಲಿಯೇ ವೇತನವನ್ನು ಸೆಳೆಯಲು ಅನುವು ಮಾಡಿಕೊಡಲಾಗುವುದು.

**ಸಂಖ್ಯೆ: ಇಪಿ 115 ಯೋಯೋಕ 2024**

(ಎಸ್. ಮಧು ಬಂಗಾರಪ್ಪ)

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು